## STATE PLAN EXPENDITURE UPTO THE END OF JANUARY 1998.

174 (457) Dr. M.P. Karki (Kumta) : Will be Deputy Chief Minister and Minister for Finance, Planning and Labour be pleased to state

a) What is the Developmental Expenditure during 1995-96, 1996-97 and 1997-98

b) What is the Plan outlay for 1997-98?

c) What is State Plan expenditure upto the end of January 1998?

Sri. Siddaramaiah Deputy Chief Minister and Minister for Finance, Planning and Labour) :

a) Developmental Expenditure (Budgetted) (Plan and Non-Plan) are as below :

| | Rs. crores |
|---|---|
| 1995-96 | 7656-20 |
| 1996-97 | 8537-55 |
| 1997-98 | 9001.92 |

b) The Plan Outlay provided for 1997-98 is Rs. 4545 crores.

c) State Plan expenditure upto the end of January 1998 is Rs. 2568.24 crores

**ಸೊರಬ ತಾಲ್ಲೂಕಿನಲ್ಲಿ ರಸ್ತೆಗಳ ದುರಸ್ಥಿ**

175 (468) ಶ್ರೀ ಕುಮಾರ ಬಂಗಾರಪ್ಪ (ಸೊರಬ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) 1997ರ ಅತಿವೃಷ್ಟಿ ಮಳೆಯಿಂದ ಸೊರಬ ತಾಲ್ಲೂಕಿನಲ್ಲಿ ರಸ್ತೆಗಳು ಹಾಳಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದರೆ ರಸ್ತೆಗಳ ದುರಸ್ತಿಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು

ಇ) ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರವು ಕೊಡಲೇ ರಸ್ತೆಯನ್ನು ಅಭಿವೃದ್ಧಿ ಪಡಿಸುವುದೇ?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ

ಅ) ಜಿಲ್ಲಾಧಿಕಾರಿಗಳಿಂದ ನೀಡಿರುವ 3.00 ಲಕ್ಷ ರೂ. ಅನುದಾನ ಹಾಗೂ 3054 ರಸ್ತೆ ಮತ್ತು ಸೇತುವೆ ಯೋಜನೇತರ ಲೆಕ್ಕ ಶೀರ್ಷಿಕೆ ಅಡಿ ರಾಜ್ಯ ಹೆದ್ದಾರಿಯ ಪ್ರತಿ ಕಿ.ಮೀ. ಗೆ 20,000 ರೂ. ಮತ್ತು ಮುಖ್ಯ ಜಿಲ್ಲಾ ರಸ್ತೆಗಳ ಪ್ರತಿ ಕಿ.ಮೀ. ಗೆ ರೂ. 15,000 ದುರಸ್ತಿ ಮತ್ತು ನವೀಕರಣ ಅನುದಾನ ಬಿಡುಗಡೆ ಮಾಡಿದ್ದು ದುರಸ್ತಿ ಕಾರ್ಯ ಕೈಗೊಳ್ಳಲಾಗುತ್ತಿದೆ.

ಇ) ಹಂತ ಹಂತವಾಗಿ ಅನುದಾನದ ಲಭ್ಯತೆಯಂತೆ ರಸ್ತೆಗಳ ಅಭಿವೃದ್ಧಿ ಕಾರ್ಯಕೈಗೊಳ್ಳಲಾಗುವುದು

**ಸೊರಬ ತಾಲ್ಲೂಕಿನಲ್ಲಿ ಪಶುವೈದ್ಯ ಸಿಬ್ಬಂದಿ ವರ್ಗದವರ ಹುದ್ದೆಗಳನ್ನು ಭರ್ತಿಮಾಡುವುದು**

176 (469) ಎಸ್. ಕುಮಾರ ಬಂಗಾರಪ್ಪ (ಸೊರಬ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಸೊರಬ ತಾಲ್ಲೂಕಿನಲ್ಲಿ ಪಶುವೈದ್ಯರ ಹುದ್ದೆಗಳು ಹಾಗೂ ಸಿಬ್ಬಂದಿ ವರ್ಗದವರ ಹುದ್ದೆಗಳು ಖಾಲಿ ಇದ್ದು, ಜಾನುವಾರುಗಳಿಗೆ ಆರೋಗ್ಯಕ್ಕೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಬಂದಿದೆ

ಆ) ಖಾಲಿ ಇರುವ ಸಹಾಯಕ ನಿರ್ದೇಶಕರ ಪಶುವೈದ್ಯ ಮೇಲ್ವಿಚಾರಕರ, ಹಿರಿಯ ಪಶುವೈದ್ಯ ಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ, ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳನ್ನು ನೇರ ನೇಮಕಾಗಿ ಮೂಲಕ ಹಾಗೂ ಪಶುವೈದ್ಯಕೀಯ ಸಹಾಯಕರ ಖಾಲಿಹುದ್ದೆಗಳನ್ನು ತರಬೇತಿ ಹೊಂದಿದ ಅಭ್ಯರ್ಥಿಗಳಿಂದ ತುಂಬಲು ಕ್ರಮ ಕೈಗೊಳ್ಳಲಾಗಿದೆ.

**ಬನ್ನೂರು ಕ್ಷೇತ್ರದಲ್ಲಿ ಪ್ರವಾಸಿ ಕೇಂದ್ರಗಳ ಅಭಿವೃದ್ಧಿ**

177 (235) ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಬನ್ನೂರು ಕ್ಷೇತ್ರದ ಸೋಮನಾಥಪುರ ತಲಕಾಡು, ಮುಡುಕುತೊರೆ, ಪ್ರವಾಸಿ ಕೇಂದ್ರಗಳಾಗಿದ್ದರಿಂದ ದೇಶ ವಿದೇಶಗಳಿಂದ ಯಾತ್ರಿಕರು ಬರುತ್ತಿರುವ ಆ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ರಸ್ತೆ ಸರಿಪಡಿಸಲು ಕೈಗೊಳ್ಳಲಾಗಿರುವ ಕ್ರಮಗಳೇನು? 1996-97, 1997-98 ರಲ್ಲಿ ರಸ್ತೆಗಳ ದುರಸ್ಥಿಗಾಗಿ ಮಂಜೂರಾಗಿರುವ ಹಣವೆಷ್ಟು? 1998-99 ರಲ್ಲಿ ಹೆಚ್ಚಿಗೆ ಹಣ ಮಂಜೂರು ಮಾಡಲಾಗುವುದೆ?